ಕಥೆ

# ಹೆಡ್ಡಪ್ಪನ ಹೊಂಡ



**ಹಾಡ್ಲಹಳ್ಳಿ ನಾಗರಾಜ್**

ಕಲೆ: ವಿ.ಎಂ. ಮಂಜುನಾಥ್



'ಒಹೊ ಹೊ ಹೋ... ಇದಕ್ಕೇನು ಕಮ್ಮಿಯಿಲ್ಲ ಬುಡು ಹಂದಿ ತುಂಡು, ಚಾಯ್ಸ್ ಸಿಕ್ಕುತ್ತೇಂದ್ರೆ ಕೋಳಿ ಕೂಗ ಹೊತ್ಗೆ ಎದ್ದು ಸಿಂಗಾರ ಮಾಡ್ಕಂಡ್ ಹೊಲ್ಟ್ ಕೂತಿರ್ತಿಯ.'

ಡೈರಿಗೆ ಹಾಲು ಹಾಕಿ ಬಂದು ಕೊಟ್ಟಿಗೆ ಸ್ವಚ್ಛಗೊಳಿಸಿ ಕಸವನ್ನೆಲ್ಲಾ ತಿಪ್ಪೆಗೆ ಹಾಕಿ ಬಂದ ಹೆಡ್ಡಪ್ಪ ಮುಖ ಕ್ಷೌರಕ್ಕೆ ಕುಳಿತಿದ್ದ. ಹದಿನೈದು ದಿನಗಳಿಂದ ಬ್ಲೇಡು ಕಾಣದೆ ಹುಲುಸಾಗಿ ಅರ್ಧ ಇಂಚು ಬೆಳೆದಿದ್ದ ಒರಟು ಗಡ್ಡ ಎರಡೆರಡು ಬಾರಿ ಸಾಬೂನು ಹಚ್ಚಿದರೂ ಬ್ಲೇಡಿಗೆ ಬಗ್ಗದೆ ಸತಾಯಿಸುತ್ತಿತ್ತು. ಆ ಹೆಣಗಾಟದಲ್ಲಿದ್ದ ಅವನಿಗೆ ಹೆಂಡತಿ ಹೊನ್ನಮ್ಮನ ಮಾತಿನಿಂದ ಇರುಸುಮುರುಸಾಯಿತು.

'ಅದ್ಯಾಕೆ ಹಂಗಾಡ್ತಿಯಾ... ನಾನೇನು ಬೆಳಗ್ನಿಂದ ಸುಮ್ನೆ ಕೂತಿದೀನಾ' ಎಂದ.

'ಇನ್ನೇನು ಮತ್ತೆ.. ಅವಸರದಮ್ಮನಿಗೆ ಹಂದಿ ಹರಕೆ ಒಪ್ಸಕೆ ಹೊರಟರವ್ರು ಆ ಪಟೇಲಪ್ಪನ ಮನೆಯವ್ರು... ಅವಸರ ಪಡ್ತಾ ಇರವ್ರು ನಿನ್ನಂತಾ ಈ ಊರ ಗಂಡಸ್ರು. ಹಂಗಾಗೆ ಆ ದೇವಿಗೆ ಆ ಹೆಸ್ರು ಇಟ್ಟವ್ರ ಏನಾ... ನನಗೂ ನಾಕು ರಾಸನ್ನು ದಿನಾ ಎಳೆದಾಡಿ ಸೊಂಟ ಎಲ್ಲಾ ಬಿದ್ದೋಗಿತೆ... ಆ ಕರಾವಿನ ಹಸನೂ ಕಡಸುಗಳನ್ನೂ ಆಮೇಲೆ ನಾನು ಹೊಡ್ಕಂಡು ಹೋಗ್ತಿನಿ. ನೀನು ಆ ದೊಡ್ಡ ಹಸ ಒಂದ ಕೆರೆತಕೆ ಹೊಡ್ಕಂಡ್ ಹೋಗಿ ನೀರು ಕುಡ್ಸಿ ಮೈ ಮ್ಯಾಕೆ ಅಷ್ಟು ನೀರು ಉಗ್ಗಿ ಹೊಡ್ಕಬಂದು ಹೊಲದ್ ತಾಕೆ ಕಟ್ಬಾಕಿ ಹೋಗು.'

'ಹಾಂ.. ಮೆಲ್ಲಕೆ..ಅವಸರ ಮಾಡ್ಕಂಡ್ ನೆಗಿಸ್ಕಂಡ್ ಹೋಗ್ಬುಟ್ಟೀಯಾ ಎಲ್ಲಾದ್ರೂ... ತುಂಬಿದ ಗಬ್ಬ...' ಹೊನ್ನಮ್ಮ ಗಂಡನಿಗೆ ಎಚ್ಚರಿಕೆಯ ಮಾತು ಹೇಳುತ್ತಲೇ ಅಡುಗೆ ಕೋಣೆ ಹೊಕ್ಕರೆ, ಹೆಡ್ಡಪ್ಪ ಅವಸರ ಅವಸರದಲ್ಲಿ ತನ್ನ ಕೆಲಸ ಮುಗಿಸಿ ಹೊರಬಂದಿದ್ದ.

ಆಗಲೇ ಊರ ಗಂಡಸರೆಲ್ಲಾ ಯಾವುದೋ ಮದುವೆ ಸಮಾರಂಭಕ್ಕೆ ಹೊರಡುವವರಂತೆ ಶುಭ್ರ ಅಂಗಿ ಮಡಿ ಪಂಚೆ ತೊಟ್ಟು ಹೆಗಲ ಮೇಲೆ ಟವಲ್ ಹಾಕಿಕೊಂಡು ದನ ಕರು ಕಟ್ಟಿ ಹಾಕುತ್ತಾ ಅವಸರದಲ್ಲಿ ಓಡಾಡುತ್ತಿದ್ದಾರೆ. ಸೈಕಲ್‌ನಲ್ಲಿ ಹೋಗುವವರು ಆಗಲೇ ಹೊಂಡದ ಆಚೆಯ ರಸ್ತೆಯಲ್ಲಿ ಸೈಕಲ್ ತುಳಿಯುತ್ತಿದ್ದಾರೆ.

'ಟ್ರಾಕ್ಟರು ಇನ್ನೇನು ಹೊರಡ ಹೊತ್ತಾಗಿತೆ. ಟಿವಿಎಸ್‌ನಲ್ಲಿ ಕರ್ಕಂಡ್ ಹೋಗ್ತೀನಿ' ಅಂತ ಹೇಳಿದ್ದ ಕರಿಯಣ್ಣನೂ ಹೊರಡೊ ಹೊತ್ತೆ. 'ಅವ್ರೂ ಬುಟ್ ಹೋದ್ರೆ ಐದಾರು ಕಿಲೋಮೀಟರ್ ನಡ್ದು ಹೋಗಬೇಕಾಗುತ್ತೆ' ಎಂದು ಯೋಚಿಸುತ್ತಲೇ ಹೆಡ್ಡಪ್ಪ ಹಸುವಿನ ಹಗ್ಗ ಬಿಚ್ಚಿ ನಡೆಸತೊಡಗಿದ.

ಉಹುಂ. ಆ ತುಂಬಿದ ಗಬ್ಬದ ಹಸು ಅವನ ಅವಸರಕ್ಕೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಹೆಡಗೆ ಗಾತ್ರದ ಕೆಚ್ಚಲು ಹೊತ್ತ ಅದು ಗಳಿಗೆಗೊಂದು ಹೆಜ್ಜೆ ಕಿತ್ತು ಅಡ್ಡರಗಾಲು ಹಾಕುತ್ತಾ ನಡೆಯುತ್ತಿದೆ.

'ಹಿಂಗಾದ್ರೆ ಇದು ಕೆರೆ ಹಡ್ಲು ತಲುಪುವುದಕ್ಕೆ ಮಧ್ಯಾಹ್ನ ಆಗುತ್ತೆ. ಏನಪ್ಪಾ ಮಾಡೊದು' ಎಂದು